7. ಬೀರೂರು ಅಜ್ಜಂಪುರದ ರಸ್ತೆಯನ್ನು ಉತ್ತಮ ಸ್ಥಿತಿಗೆ ತರತಕ್ಕ ಬಗ್ಗೆ ರೂ. 472ಕ್ಕೆ ತಯಾರಾಗಿ ಪ್ರೆಸಿಡೆಂಟರವರ ಅಡ್ಡ ರುಜುವಿಗೋಸ್ಕರ ಮೂಲಪೂಫಿಸಿ ಬಂದ ಕಡೂರು ಡಿವಿಜ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ 13—3—07ನೆ ಮಾರ್ಕ್ಕಂ 68ನೆ ಡಾಕೆಟ್ ಓದಲಾಗಿ ಈ ರಸ್ತೆಯು ಅತಿ ಜರೂರಾಗಿ ದುರಸ್ತಿ ಆಗತಕ್ಕದ್ದೆಂತ ತಿಳಿಯಬರೋಣದರಿಂದಲೂ ಇತರ ರಸ್ತೆ ಕೆಲಸಗಳಿಗೋಸ್ಕರ ಮಂಜೂರಾಗಿರುವ ಹಣಗಳ ಪೈಕಿ ಬಾಬು ಹೊರಳಿ ಮೂಲಕ ಕೆಲಸ ನಡಿಸಲು ಅನುಕೂಲವಿಲ್ಲವೆಂತ ಎಗ್ಸಿಕ್ಯೂಟಿವ್ ಇಂಜಿನಿಯರು ಹೇಳಿಯವದ್ದರಿಂದಲೂ ಈ ಕಾಮಗಾರಿಗೆ ಅವಶ್ಯಕವಿರುವ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡ್ಸಿನಲ್ಲಿ ಉಳಿಯತಕ್ಕ ಆಜ್ಞೆರು ಶಿಲ್ಕಿನ ಪೈಕಿ ಮಂಜೂರು ಮಾಡತಕ್ಕ ಬಗ್ಗೆ ಗವರ್ನಮೆಂಟಿಗೆ ಬರಸಬೇಕಾಗಿ ತೀರ್ಮಾನಿಸಲಾಯಿತು.

8. ಬಾಬಾಬುಡೆಗಿರಿಯ ರಸ್ತೆಯ ಸ್ಪೆಷಲ್ ರಿಪೇರಿಗಾಗಿ ತಯಾರಾದ 2,932 ರೂಪಾಯಿಗಳ ಅಂದಾಜುವನ್ನು ಪ್ರೆಸಿಡೆಂಟರವರ ಅಡ್ಡ ರುಜುವಿಗಾಗಿ ಮೂಲಪೂಫಿಸಿ ಸದರಿ ಕಾಮಗಾರಿಗೆ ಅವಶ್ಯಕವಿರುವ ಹಣ ಸಹ ಪಬ್ಲಿಕ್ ವರ್ಕ್ಸ್ ಇಲಾಖೆಗೆ ವರ್ಗಾಯಿಸ ಬೇಕೆಂತ ಸಹ ಕಡೂರು ಡಿವಿಜ್ ಎಗ್ಸಿಕ್ಯೂಟಿವ್ ಇಂಜಿನಿಯರವರ 11—3—07ನೆ ಮಾರ್ಕ್ಕಂ 62ನೆ ನಂಬರು ಡಾಕೆಟ್ ಓದಲಾಗಿ ಇತರ ರಸ್ತೆ ಕಾಮಗಾರಿಗಳಿಗೆ ವದಗಿಸಿರುವ ಹಣಗಳ ಪೈಕಿ ಬಾಬು ಹೊರಳಿ ಮಾಡಿಕೊಂಡು ಈ ಕೆಲಸ ನಡಿಸುವದಕ್ಕೆ ಅನುಕೂಲವಿಲ್ಲದ್ದರಿಂದ ಈ ಕೆಲಸವನ್ನು ಮುಂದಿನ ಸಾಲಿನವರಿಗೆ ನಿಲ್ಲಿಸಬೇಕಾಗಿ ತೀರ್ಮಾನಿಸಲಾಯಿತು.

9. ತರೀಕೆರೆಯಿಂದ ದೊಡ್ಡಕೆರೆ ಮಾರ್ಗವಾಗಿ ಹಾದೀಕೆರೆಗೆ ಬಂದು ರಸ್ತೆ ಮಾಡಿಸಿಕೊಡಬೇಕೆಂತ ಬಂದ ದಸರಾ ಪ್ರಜಾಪ್ರತಿನಿಧಿ ಸಭೆಯ 430ನೆ ಪ್ರಸ್ತಾಪವನ್ನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆಲೋಚನೆ ಬಗ್ಗೆ ಮೂಲಪೂಫಿಸಿ ಬಂದ 11—1—07ನೆ ಮಾರ್ಕ್ಕಂ 6326—L. F. (211-06)-1ನೆ ನಂಬರು ಸಕ್ರಿಟೆರಿಯವರ ಡಾಕೆಟ್ ಮತ್ತು ಇದೇ ವಿಚಾರವಾಗಿ 9—3—07ನೆ ಮಾರ್ಕ್ಕಂ ತರೀಕೆರೆ ತಾಲ್ಲೂಕು ಬೋರ್ಡಿನವರ ತೀರ್ಮಾನವನ್ನು ಸಹ ಓದಲಾಗಿ ಹಣವಿಲ್ಲದ್ದರ ದೆಸೆಯಿಂದ ಇದಕ್ಕಿಂತಲೂ ಜರೂರಾತಿಯಾಗಿಯೂ ಮುಖ್ಯವಾಗಿಯೂ ಇರತಕ್ಕ ಕೆಲಸಗಳನ್ನೆಲ್ಲಾ ನಿಲ್ಲಿಸಿರೋಣದಿಂದ ಹಣ ವದಗಿದಾಗ್ಯೆ ಈ ವಿಚಾರವನ್ನು ಯೋಚಿಸಬಹುದೆಂತ ತೀರ್ಮಾನಿಸಲಾಯಿತು.

10. ಸಂತವೇರಿ ಬಂಗಲೆಯನ್ನು 2ನೆ ಕ್ಲಾಸ್ ಬಂಗ್ಲೆಯನ್ನಾಗಿ ಮಾಡಬೇಕೆಂತಲೂ ಅದಕ್ಕೆ ತಕ್ಕ ಸಾಮಾನುಗಳಿಲ್ಲವನ್ನು ವದಗಿಸಬೇಕೆಂತಲೂ ಸಹಾ ಚೀಫ್ ಇಂಜಿನಿಯರು ಸದರಿ ಬಂಗಲೆಯನ್ನು ಇನ್‌ಸ್ಪೆಕ್ಷನ್ ಮಾಡಿದ ವೇಳೆ ಬರದ ಇನ್‌ಸ್ಪೆಕ್ಷನ್ ನೋಟ್ಸ್ ಎಕ್ಸ್‌ಟ್ರಾಕ್ಟು ಮೂಲಪೂಫಿಸಿ ಬಂದ 25—3—07ನೆ ಮಾರ್ಕ್ಕಂ 78ನೆ ನಂಬರು ತರೀಕೆರೆ ತಾಲ್ಲೂಕು ಅಮಲ್ದಾರ್‌ರವರ ರಿಪೋರ್ಟು ಓದಲಾಗಿ ಆ ರೀತಿ ಮಾಡಬಹುದೆಂತ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

11. ಅಜ್ಜಂಪುರದಿಂದ ಬುಕ್ಕಾಂಬುಧಿಗೆ ರಸ್ತೆ ಮಾಡತಕ್ಕ ಬಗ್ಗೆ ಮೊದಲು ರಸ್ತೆ ಗುರ್ತಿಸತಕ್ಕ ಬಗ್ಗೆ ಸರ್ವೆ ಮಾಡತಕ್ಕ ಬಗ್ಗೆ 60 ರೂಪಾಯಿಗಳಿಗೆ ತಯಾರಾದ ಅಂದಾಜು ಮೂಲಪೂಫಿಸಿ ಬಂದ 15—4—07ನೆ ಮಾರ್ಕ್ಕಂ 99ನೆ ಡಾಕೆಟ್ ಓದಲಾಗಿ ಈ ಅಂದಾಜುವನ್ನು ಮಂಜೂರು ಮಾಡಬಹುದಾಗಿ ತೀರ್ಮಾನಿಸಲಾಯಿತು.

12. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರು ಮೆ॥ ವಾಟರ್ಸ ಸಾಹೇಬರ ರಾಜೀನಾಮೆಯನ್ನು ಓದಲಾಗಿ ಸದರಿ ರಾಜೀನಾಮೆಯನ್ನು ಅಂಗೀಕರಿಸಬಹುದೆಂತಲೂ ಮೆ॥ ವಾಟರ್ಸ್‌ರವರಿಗೆ ಬದಲಾಗಿ ಮೆ॥ ಆಲಾರ್ಡಿಸ್ ಸಾಹೇಬರನ್ನು ಮೆಂಬರನ್ನಾಗಿ ಜಾಯಿನ್ ಮಾಡಿಸಬಹುದೆಂತ ತೀರ್ಮಾನಿಸಲಾಯಿತು.

13. ಭಾವೀಕೆರೆ ಭೂವಿಗೆ ಹೆಚ್ಚು ಕೆಲಸ ನಡದ ಬಗ್ಗೆ ತಯಾರಾಗಿ ಬಂದ 34 ರೂಪಾಯಿ ಅಂದಾಜುವನ್ನು ಓದಲಾಗಿ ಅಂದಾಜುವನ್ನು ಮಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

14. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು 1907ನೆ ಇಸವಿ ಜುಲೈ 30ನೆ ಮಂಗಳವಾರ ನಡಿಯಬೇಕೆಂತ ತೀರ್ಮಾನಿಸಲಾಯಿತು.

ಎಂ. ಲಕ್ಷ್ಮಣಶಾಸ್ತ್ರಿ,
ವೈಸ್ ಪ್ರೆಸಿಡೆಂಟ್.

ಚಿಕ್ಕಮಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ವ॥ 1906—07ನೆ ಇಸವಿ ಮಿ॥ ಅರ್ಜಿ ನಂಬರ್ 459.

ಚಿಕ್ಕಮಗಳೂರು ತಾಲ್ಲೂಕು ಮಳಲೂರು ಗ್ರಾಮದ ಕಾಡೈಯ್ಯನವರ ಮಗ ಪೆರ್ಸ್ ಸ್ಕೂಲ್ ಮಾಸ್ಟರ್ ಆಗಿ ಮೃತಪಟ್ಟ ವೆಂಕಪ್ಪಯ್ಯ ಎಂಬವರ ಚಿಕ್ಕಮಗಳೂರ್ ಪೋಸ್ಟಾಪೀಸು ಸೇವಿಂಗ್ಸ್ ಬ್ಯಾಂಕು ಬಾಬತ್ತು 200 ರೂಪಾಯಿಗಳು ಅದರ ಬಡ್ಡಿ ವಿಷಯದಲ್ಲಿ—

ಅರ್ಜಿದಾರರು ವೆಂಕಟರವಣಪ್ಪೈಯ್ಯನು ಮೃತಪಟ್ಟ ಸದರೀ ವೆಂಕಪ್ಪಯ್ಯ ಎಂಬವರಿಗೆ ಚಿಕ್ಕಪ್ಪನ ಮಗನು ಆಗಬೇಕೆಂಬ ಹಕ್ಕು ದಾರಿನೇಲೆ ಮಳಲೂರು ಸ್ಥಳದ ವೆಂಕಟರವಣಪ್ಪೈಯ್ಯ ಎಂಬುವರು ಮಳಲೂರು ವಾಸಸ್ಥರಾಗಿ ಮೃತಪಟ್ಟ ಸದರಿ ವೆಂಕಪ್ಪಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲಿಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರವಣಪ್ಪೈಯ್ಯನ ಅರ್ಜಿಯನ್ನು ಸ್ವ॥ 1907ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಚಾರ್ಕ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಪ್ಪಯ್ಯನೆಂಬುವರ ಆಸ್ತಿಗೆ ಹಕ್ಕು ದಾರರಾದ ವಿಷಯ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂಬ ಇದರಿಂದ ತಿಳಿಯಪಡಿಸಿ ಇದೆ.

ಸ್ವ॥ 1907ನೆ ಇಸವಿ ಜೂನ್ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟ್ ಮೊಹರಿನಿಸಿ ನನ್ನಿಂದ ಸಹಿ ಹೊಡಿಸಿ ಕೊಡೋಣಾಗಿದೆ.

ಡಿ. ಎಂ. ನರಸಿಂಗರಾವ್,